Daily & Weekly SATYAVADI Founded 1917 Regd No. M 1299

ಸತ್ಯವಾದಿ

ಚಂದಾ ತಿಂಗಳಿಗೆ 6 ಅಣೆ ಸಂಪುಟ 26 ಸಂಚಿಕೆ 130] ಶುಕ್ರವಾರ 26—3—1943 [3 ಪೈ

ವಿವಿಧ ವರ್ತಮಾನ

ನಿನ್ನೆ ದಿವಸ ಅಸೆಂಬ್ಲಿಯಲ್ಲಿ ಶ್ರೀಮಾನ್ ಕೃಷ್ಣಮಾಚಾರ್ಯರು ಕೇಳಿದ ಪ್ರಶ್ನೆಗೆ ಸರ್ಕಾರದವರು ಈಗ ಕಾಂಗ್ರೆಸ್‌ನವರು 8000 ಮಂದಿ ಒಂಧಿಸಲ್ಪಟ್ಟಿರುವರೆಂದೂ, ಇವರು ತಲೆಕೆಳಕು ಮಾಡುವಂತೆ ತೋರುತ್ತಿರುವುದರಿಂದ ಇವರನ್ನು ಬಿಡಲು ಸಾಧ್ಯವಿಲ್ಲವೆಂತಲೂ, ಪ್ರಾಂತಿಕ ಸರ್ಕಾರದವರು ಈಗಲೇ ಅನೇಕರನ್ನು ಬಿಟ್ಟಿರುವುದಾಗಿಯೂ, ಕಾಂಗ್ರೆಸ್ ಅನುವಾಯಿದೆಗಳಿಂದ ತೊಂದರೆಯಿಲ್ಲವೆಂದು ತಿಳಿದಾಗ ಬಿಡುತ್ತಲೂ, ಜಡುವರೆಂದು ಹೇಳಿದರು. ಈ ಚರ್ಚೆ ಮುಂದುವರಿಯುತ್ತಿದೆ.

ನಿನ್ನೆ ದಿವಸ ಚಿಟಗಾಂಗ್ ಮೇಲೆ ಜಪಾನರ ದಾಳಿಯಾಯಿತು. ನಷ್ಟವೇನು ಆಗಲಿಲ್ಲ.

ಜರ್ಮನರು ಪದೇ ಪದೇ ಸುಳ್ಳು ಹೇಳುತ್ತ ಮಿತ್ರ ಪಕ್ಷದವರ ನೌಕೆಗಳನ್ನು ಮುಳುಗಿಸುತ್ತೇನೆಂದು ಹೇಳುವರು. ಇದು ಶುದ್ಧ ಸುಳ್ಳು ಎಂದು ಮಿ|| ಚರ್ಚಿಲ್ಲರು ಪಾರ್ಲಮೇಟಿನಲ್ಲಿ ಹೇಳಿದರು

ಮೊನ್ನೆ ಹೋಳೀ ಹಬ್ಬದ ಪ್ರಯುಕ್ತ ಚಿತ್ರದುರ್ಗದಲ್ಲಿ ಜಿಲ್ಲಾ ಲಾಕಪ್ಪಿನಲ್ಲಿರುವ ಖೈದಿಗಳಿಗೆ ಚಿತ್ರದುರ್ಗದ ಕಾಂಗ್ರೆಸ್ಸಿನವರು ಹೋಳಿಗೆಗಳನ್ನು ಲಾಕಪ್ ಆಫೀಸು ಅಪ್ಪಣೆ ಪಡೆದು ಹಂಚಿದರೆಂದು ತಿಳಿಯ ಬಂದಿದೆ.

ಕೊಚೆನ್ನಿನಲ್ಲಿ ಸಂಪೂರ್ಣ ಜವಾಬ್ದಾರಿ ಸರ್ಕಾರವಿರಬೇಕೆಂಬ ನಿರ್ಣಯವು ಅಲ್ಲಿ ಕೌನ್ಸಿಲ್ಲಿನಲ್ಲಿ ಮಂಜೂರಾಯಿತು.

ಲಕ್ನೋ ಹಳ್ಳಿಗಳ ಮೇಲಿ ಪುಂಡು ಕುದಾಯ ವಿಧಿಸಲಾಗಿದೆ.

ಅಹಮದಾಬಾದಿನಲ್ಲಿ ಕರ್ಫ್ಯೂ ಆರ್ಡರ್ ಮುಂದುವರಿಸಲಾಗಿದೆ.

ಭಂಗಾರ ಬೆಳ್ಳಿ ಧಾರಣೆ

ಸವರ್ತ	ರೂ.	50-4-0
ಬಂಗಾರ ತೋಲ	ರೂ.	70-10-0
ಬೆಳ್ಳಿ	,,	1-2-0

ಡೊನೆಟ್ಸಿನ ಭಾರೀ ಕದನ

— ನದಿ ದಾಟುವ ಮಾರ್ಗಕ್ಕಾಗಿ ಹೊಡೆದಾಟ —

ಉತ್ತರ ಡೆನೆಟ್ಸ್ ಕಡೆ ಬೈಲ್‌ಗೊರಾಡ್ ಮತ್ತು ಚುಗುಯೆವ್ ಭಾಗದಲ್ಲಿ ರಷ್ಯನರು ಭದ್ರವಾದ ರಕ್ಷಣವನ್ನು ತಾಳಿರುವರು. ಇವರ ರಕ್ಷಣ ಭೇದಿಸಲು ನಾಜಿಗಳ ಟ್ಯಾಂಕ್ ಮತ್ತು ಕಾಲಾಳು ಪಡೆಗಳು ಅನೇಕ ಸ್ಥಳಗಳಲ್ಲಿ ಶ್ರೇಷುಂಪಲಾಗಿದೆ.

ರಷ್ಯನರ ಅಬಿಸ್ಕಯಾದ ಡಿಸ್ಟ್ರಿಕ್ಟ್ ಕೇಂದ್ರವನ್ನೂ ಮತ್ತು ರೈಲ್ವೆ ಸ್ಟೇಷನ್ನನ್ನು ಪುನಃ ಹಿಡಿದಿರುವರು.

ಸ್ಮೊಲೆನ್ಸ್ಕ್ ಕಡೆ ಹೊಡೆದಾಟ ತೀವ್ರವಾಗಿದೆ.

ಲಡೋಗಾ ಸರೋವರದ ದಕ್ಷಿಣದಲ್ಲಿ ರಕ್ಷಣಾ ಯುದ್ಧವು ಬಿರುಸಾಗಿ ನಡೆಯುತ್ತಿರುವುದಾಗಿ ಜರ್ಮನ್ ವರದಿ.

ಆರು ದಿವಸಗಳ ಹೊಡೆದಾಟದಲ್ಲಿ ಜರ್ಮನರ ಕಡೆ 7000 ಆಫೀಸರುಗಳೂ ಸೈನಿಕರೂ ಕೊಲ್ಲಲ್ಪಟ್ಟರು ಮತ್ತು 140 ಟ್ಯಾಂಕರಗಳು ನಾಶನಾಗಿವೆ.

ಂ ಂ ಂ

ಮಾರೆತ್ ಲೈನ್ ಯುದ್ಧ

— ರೊಮೆಲ್ಲನ ಪ್ರತಿಧಾಳಿ—ನಾಜಿಗಳು ಸೇತುವೆ ಸ್ಥಳಗಳಲ್ಲಿ —

— ಪುನಃ ದೊರೆಕಿಸಿಕೊಂಡರು —

ಜರ್ಮನರು ಮಾರೆತ್ ಲೈನಿನಲ್ಲಿ ತಮ್ಮ ಪ್ರಮುಖ ರಕ್ಷಣಾಸ್ಥಾನವನ್ನೇ ಪರ್ಡಿಸಿರುವರೆಂದು ಮಿ|| ಚರ್ಚಿಲ್ಲರು ಕಾಮನ್ಸ್ ಸಭೆಯಲ್ಲಿ ತಿಳಿಸಿದರು. ಟ್ಯುನಿಷಿಯಾದಲ್ಲಿ ಯುದ್ಧವು ಕಡೆಯ ಸ್ಥಿತಿಯಲ್ಲಿಲ್ಲವೆಂದೂ ಬ್ರಿಟಿಷರೂ ಮತ್ತು ಮಿತ್ರ ಮಂಡಲಿಯವರೂ ಕಷ್ಟತರವಾದ ಯುದ್ಧವನ್ನೆದುರಿಸಬೇಕಾಗಿರುವುದೆಂದೂ ತಿಳಿಸಿರುವರು.

ರೊಮೆಲ್ಲನು ತನ್ನ ಸೈನ್ಯಗಳನ್ನು ಕಳುಹಿಸಿ, ಬ್ರಿಟಿಷ್ ಸೈನ್ಯ ಮುಂದುಪರಿಯದಂತೆ ಪ್ರತಿಭಟಿಸುತ್ತಿದ್ದಾನೆ.

ರೊಮೆಲ್ಲನು ಖೈದಿಯಾಗಿ ಹಿಡಿಯಲ್ಪಟ್ಟರೆ, ಜನರಲ್ ಜೀರೋ ಅವನನ್ನು ನೋಡಬೇಕಂತೆ !

ಂ ಂ ಂ

ಗುಡಲ್‌ಕೆನಾರ್ ಮೇಲೆ ದಾಳಿ

—ಶತ್ರು ನಿಲ್ದಾಣಗಳ ಮೇಲೆ ಮಿತ್ರ ಮಂಡಲಿಯ ಮುತ್ತಿಗೆ—

23 ರ ರಾತ್ರೆ ಜಪಾನ್ ವಿಮಾನಗಳು ಗುಡಾಲ್‌ಕನಾರ್ ಮೇಲೆ ದಾಳಿ ನಡೆಸಿ ತಕ್ಕಮಟ್ಟಿಗೆ ನಷ್ಟಪಡಿಸಿರುವುವೆಂದು ಅಮೇರಿಕಾ ನೌಕಾ ಖಾತೆ ಪ್ರಕಟನೆ. ರೆಕಟಾ ಕೊಲ್ಲಿಯ ನೌಕಾ ನಿಲ್ದಾಣದ ಮೇಲೆ ಅಮೆರಿಕ ವಿಮಾನಗಳು ಬಾಂಬ್ ಮಾಡಿದವು.

ಎಲ್ಲೆಲ್ಲಿ ಏನೇನು ?

ಜಪಾನೀ-ಸೂಡಾನೀ ಮತ್ತು ಪೂರ್ವ ಆಫ್ರಿಕಾದ ಹತ್ತಿಯು ಇಂಡಿಯಾಕ್ಕೆ ಆಮದಾಗದಂತೆ ಇಂಡಿಯಾ ಸರ್ಕಾರದವರು ಪ್ರತಿಬಂಧಿಸಿದ್ದಾರೆ.

ಜೈನಾದ ತೀರ ಬ್ಯಾಟರಿ ಮೂಲಕ 60 ಮಿನಿಟ್ ಗುಂಡಿನ ಹೊಡೆದಾಟದಿಂದ ಒಂದು ಜಪಾನ್ ಯುದ್ಧ ಹಡಗಿಗೆ ಭಾರಿ ಜಖಂ ಆಯಿತು.

ಮುಖಂಡರು ವೈಸರಾಯರನ್ನು ಪ್ರಾತಿಧ್ಯದಲ್ಲಿ ನೋಡುವುದಕ್ಕೆ ಮುಂಚೆ ಗಾಂಧಿಯವರ ಅಭಿಪ್ರಾಯವನ್ನು ಪಡೆಯಲು ಅವರನ್ನು ಕಾಣುವುದಕ್ಕೆ ವೈಸರಾಯರ ಅಪ್ಪಣೆ ಪಡೆದು ಪ್ರಯತ್ನಿಸುತ್ತಿರುವರೆಂದು ತಿಳಿಯ ಬಂದಿದೆ.

ವೈಸರಾಯರಿಗೆ ಮುಖಂಡರ ಪ್ರಾತಿನಿಧ್ಯವು ಕೊಡುವ ಮೆಮೋರ್ಯಾಂಡಂ ತಯಾರಾಗುತ್ತಿರುವುದಾಗಿ ತಿಳಿಯು ಬಂದಿದೆ.

ಟುಂಗೂ ವಿಮಾನ ನಿಲ್ದಾಣದ ಮೇಲೆ ಆರ್.ಎ.ಎಫ್. ನವರು ದಾಳಿ ನಡೆಸಿರುವರು.

19 ರಿಂದ 25 ವಯಸ್ಸಿನ ಚೀನೀ ಸ್ತ್ರೀಯರು ಯುದ್ಧದ ಸಹಾಯ ಕಾರ್ಯಕ್ಕೆ ಖಡ್ಡಾಯವಾಗಿ ಸೇರಬೇಕೆಂಬ ಕಾಯಿದೆಯಾಗಿದೆ.

ಜೈನಾದಲ್ಲಿ ಹಿಂದೆಂದೂ ಈ ಪದ್ಧತಿ ಇರಲಿಲ್ಲ.

ದೂರ ಪೆಸಿಫಿಕ್ಕಿನಲ್ಲಿ ಒಂದು ಅಮೆರಿಕೆ ಸಬ್‌ಮೆರೀನು ಜಪಾನ್ ಸಬ್‌ಮೆರೀನನ್ನು ಎದುರಿಸಿ ಮುಳುಗಿಸಿತು.

ಜರ್ಮನಿಯಲ್ಲಿ ತಿಂಗಳಿಗೆ 3000 ವಿಮಾನ ತಯಾರಾಗುತ್ತಿದ್ದುದು ಈಗ 2 ಸಾವಿರಕ್ಕಿಳಿದಿದೆ ಎಂದು ತಿಳಿಯ ಬಂದಿದೆ.

26/2/43.

ಅರಮನೆಯಲ್ಲಿ ವಿವಾಹ ಮಹೋತ್ಸವ

(ಸ್ವಂ. ಸು.) ಮೈಸೂರು ಮಾ 25

ಇವತ್ತು ಅರಮನೆಯು ಕಲ್ಯಾಣ ಮಂಟಪವನ್ನು ಹೂವಿನ ಗುಚ್ಛಗಳಿಂದಲೂ, ತಳಿರು ತೋರಣಗಳಿಂದಲೂ ಶೃಂಗರಿಸಿ, ಹಸೆಚಿಗುಲಿಯನ್ನು ಹಾಕಿ ಅದರಲ್ಲಿ ಗಿರಿಜಾ ಕಲ್ಯಾಣದ ಚಿತ್ರವನ್ನು ಸೃಜಿಸಿದ್ದರು. ಆಹ್ವಾನಿತರು 6 ಗಂಟೆಗೆ ಮುಂಚೆಯೇ ಬಂದು ಸೇರುತ್ತಿದ್ದರು. ದಿವಾನರೂ, ಸಚಿವರುಗಳೂ, ಉನ್ನತಾಧಿಕಾರಿಗಳೂ, ಬ್ರಿಟಿಷ್ ರೆಸಿಡೆಂಟರೂ ಮುಂತಾದ ಆಹ್ವಾನಿತರೂ ವಿವಾಹ ಮಂಟಪದಲ್ಲಿ ಮಂಡಿಸಿದ್ದರು. ಬೆಳಿಗ್ಗೆ 5 ಘಂಟೆಗೆ ಶ್ರೀ ಸಾಮಂದ್ ಯುವರಾಜರು ಧಾರಾ ಮುಹೂರ್ತಕ್ಕಾಗಿ ಲೋಕರಂಜನ ಮಹಲ್ (ಅವರ ಬಿಡಾರ) ನಿಂದ ಸಮಸ್ತ ರಾಜೈಶ್ವರ್ಯದಿಂದ ಹೊರಟು ಉತ್ತಮ ಚಿಕ್ಕಸ ಮೂಲಕ ಅರಮನೆಗೆ ಬಂದರು. ಮಹಾದ್ವಾರದಲ್ಲಿ ಅಳುವ ಮಹಾದ್ವಾರವನ್ನು ಯುವರು ಎದುರುಗೊಂಡರು. ಕಟ್ಟಲೆ ಮುತ್ತೈದೆಯರಿಂದ, ಜವಾಹರಿ ಆರತಿ, ಬೆಳ್ಳಿದ ಆರತಿ ಮುಂತಾದ ಆರತಿಗಳು ಎತ್ತಲ್ಪಟ್ಟವು. ವರನ ಕಡೆಯವರು ಎಲ್ಲರೂ ಅಕ್ಕಿ ಅರಳು ಎರೆಚಿದರು. ಅನಂತರ ಪೂರ್ವ ಪ್ರಕ್ರಿಯೆಗಳು ಫಲಸಮರ್ಪಣೆ, ನೊಂದಲಾದ ನೈದೀಕ ಉಪಚಾರಗಳು ನಡೆದವು. ಅನಂತರ ವಿವಾಹ ಮಂಟಪಕ್ಕೆ ಬೀಜಮಾಡಿಸಿದರು.

ಕಲ್ಯಾಣ ಮಂಟಪದಲ್ಲಿ 6½ ಘಂಟೆಗೆ ವಧುವು ದಾಕ್ಷಾಯಣಿ ಪೂಜೆ ಮಾಡಿದಳು. ಸಿಚ್ಚಿತಾರ್ಥ, ವಧು ಪರೀಕ್ಷೆ ಮಹಾಸಂಕಲ್ಪ ಸಂಬಂಧವಾಲೆ ಹಾಕುವುದು ಧಾರೆ, ಮಾಂಗಲ್ಯ ಧಾರಣೆ ಬೆಳೆಯಿತು. ಆಗ ಬಿಗಿ ಗುಂಡುಗಳು ಹಾರಿಸಲ್ಪಟ್ಟವು.

ಅನಂತರ ಶ್ರೀ ಶೃಂಗೇರಿ, ಕೂಡ್ಲಿ, ಸರಕಾಲ, ಉತ್ತರಾದಿ ಮುಂತಾದ ಮಠಗಳ ಮತ್ತು ಶ್ರೀ ಚಾಮುಂಡೇಶ್ವರಿಬೆಟ್ಟ ನಂಜನಗೂಡು ಮುಂತಾದ ಕಡೆಯ ಫಲಮಂತ್ರಾಕ್ಷತೆ, ಪ್ರಸಾದ, ವಸ್ತ್ರ ಶ್ರೀ ರಾಜಕುಮಾರ ದೇಶಂರಾಜೆಅರಸಿನವರ ಸರನಾಗ್ ಲಕ್ಷ್ಮೀಕಾಂತರಾಜೇಅರಸ್ ಸರದಾಗ್ ಬಸವರಾಜೆಅರಸ್, ಸೋದರಮಾವಂದಿರ ಪ್ರಸಾದ ನಡೆಯಿತು.

ಶ್ರೀ ಮೂಲಶಂಕರ ರವಿಶಂಕರ್ ಎಂಬ ಜ್ಯೋತಿಷ್ಯ ವಿದ್ವಾಂಸರಾದ (ಸಾನಂದ ಸಂಸಾನದವರು) ವರದ ಕಡೆಯವರು ಸಂಸ್ಕೃತದಲ್ಲಿ ವಧೂವರರ ದಾಂಪತ್ಯ ಶ್ಲೋಕವನ್ನು ಸಭೆಯಲ್ಲಿ ಪಠಿಸಿದರು, ಇದರ ಪ್ರತಿಗಳನ್ನು ರಾಜಕುಮಾರ ದೇಶರಾಜೇ ಅರಸ್, ದಿವಾನರು, ಸಚಿವರುಗಳಿಗೆ ಕೊಟ್ಟರು.

ಸಭೆಯಲ್ಲಿ ಶ್ರೀ ಸಂಗೀತರತ್ನ ವಾಸುದೇವಾಚಾರ್ಯರವರು ತಿಟ್ಟೆ ಕೃಷ್ಣಯ್ಯಂಗಾರ್ಯರ ಸುಗೀತ ಸಡೆಯಿತು ತಾಳೆಯೂ ನಡೆಯಿತು. ನಂತರ ಸರ್ವರಿಗೂ ತಾಂಬೂಲ, ಪುಷ್ಪಹಾರ. ಚೀಲದಲ್ಲಿ ಕೊಬ್ಬರಿ ಹೂರಿಗಡಲೆ ಕಲ್ಯಾಣಸೇವೆ ಹಾಕಿ ಕೊಟ್ಟರು.

ಪಧೂವರರು ಕಲ್ಯಾಣ ಮಂಟಪದಿಂದ ಅರಮನೆಗೆ ಎದ್ದು ಬಳಿಕ್ಕೆ ಭೂಮುಕ್ಕೂ, ದೇವರಮನೆ ಬಾಗಲಿನ ಹೊಸಲಿನ ಮೇಲೆ ಇಡುವ ಹಣ್ಣು, ಜೆಲ್ಲು, ಭತ್ತದ ಪಾತ್ರೆಯನ್ನು ಒಲಗಾಲಿನಿಂದ ಒದೆಯುವುದು, ದೇವಮನೆ ಪ್ರವೇಶ, ಹಾಲು ಹಣ್ಣು ಸೇವನೆ, ಹಣ್ಣುಕಾಯಿ ಶಾಸ್ತ್ರ, ಅಂಬುಜಡುವ ಶಾಸ್ತ್ರ, ಪರತಿ ಮುಂತಾದುವುಗಳನ್ನು ನೆರವೇರಿಸುವುದಕ್ಕೆ ದಕ್ಕೆ ದಯಮಾಡಿಸಿದರು,

ವರನ ಕಡೆಯವರು, ಬ್ರಿಟಿಷ್ ರೆಸಿಡೆಂಟರು, ಮುಂತಾದ ಅನೇಕ ಆಹ್ವಾನಿತರು ಕಲ್ಯಾಣಮಂಟಪದ ಮಹಡಿಯ ಮೇಲೆ ಕೂತಿದ್ದರು. ರಾಜವಂಶೀಕರ ಪೋಷಾಹೆಂಗಸರು ತಕ್ಕಸ್ಥಳದಲ್ಲಿ ನೆರೆದಿದ್ದರು.

ರಾತ್ರಿ 9-30 ಕ್ಕೆ ಸಜ್ಜೆ ಮೇಲೆ ಉರಟಣೆ, ಉಯ್ಯಾಲೆ ನಡೆಯಿತು.

ಮಹಾರಾಜರವರ ಭಕ್ತದಲ್ಲಿ ಸಂತರ್ಪಣೆ, ಶ್ರೀ ತ್ರಿನಯನೇಶ್ವರ ಮತ್ತು ಶ್ರೀ ವರಾಹಸ್ವಾಮಿ ದೇವಸ್ಥಾನದಲ್ಲಿ ಹೆಂಗಸರಿಗೂ, ಗಂಡಸರಿಗೂ, ಮಕ್ಕಳಿಗೂ ಭೂರಿದಕ್ಷಿಣೆ ನಡೆಯಿತು.

ಶನಿವಾರ ಮಂಗಣಿಗೆ ನಡೆಯುತ್ತದೆ.

ಸ್ಟಾಲಿನ್ — ಹಿಟ್ಲರ್

ಲಂಡನ್ನಿನಲ್ಲಿರುವ ರಷ್ಯಾರಾಯಭಾರಿ ಸರ್ ರವರು, ಜರ್ಮನಿಯುದ್ಧವು ಈಗಲೇ ಮುಗಿಯುವಹಾಗಿಲ್ಲವೆಂದೂ, ಜರ್ಮನಿಯವರು ಇನ್ನೂ ಸೋತಿಲ್ಲವೆಂದೂ, ಸ್ಟಾಲಿನ್ನರು ಹಿಟ್ಲರನ್ನು ನಾಶಮಾಡದೆ ಬಿಡುವುದಿಲ್ಲವೆಂದೂ, ಒಂದು ಕೂಟದಲ್ಲಿ ಹೇಳಿದರು

ಕಮಿಟಿ ನಿರ್ಮಾಣ

ಮಿ || ರೂಸವೆಲ್ಟರು ಅಮೇರಿಕಾದಲ್ಲಿ ಆಹಾರ ಪದಾರ್ಥಗಳನ್ನು ಶೀಘ್ರ ಮಾಡುವುದಕ್ಕೂ ನಿಯೋಗ ಮಾಡುವುದಕ್ಕೂ ವ್ಯವಸಾಯದ ಮಂತಿಯ ಅಧ್ಯಕ್ಷತೆಯಲ್ಲಿ ಒಂದು ಕಮಿಟಿಯನ್ನು ನಿರ್ಮಿಸುವರು

ಶ್ರೀ ಸರೋಜಿನಿ ದೇವಿಯವರು

ನಿನ್ನೆ ಶ್ರೀ ಸರೋಜಿನಿ ದೇವಿಯವರಿಗೆ ಜ್ವರ ಹೆಚ್ಚಿತ್ತು. ಪುನಃ ಸಾಯಂಕಾಲದಲ್ಲಿ ಕಮ್ಮಿಯಾಗಿದೆ.

ಸತ್ಯವಾದಿ ಪತ್ರಿಕೆಗೆ ಚಂದಾದಾರರಾಗಿರಿ

ದಿನ ಮತ್ತು ವಾರಪತ್ರಿಕೆಗೆ

ಚಂದಾ ಮೈಸೂರು ಮತ್ತು ಏಜೆಂಟರಿರ ತೆಕ್ಕ ಸ್ಥಳದಲ್ಲಿ ತಿಂಗಳಿಗೆ 6 ಆಣೆ

ಅಕ್ಕರ

ಸಾಮಾಜಿಕ

ಭಾವಪರಿಪೂರ್ಣವಾದ ಕಥೆ

ಓದಲು ಪ್ರಾರಂಭಿಸಿದರೆ ಕಥೆ ಪೂರೈಸುವವರೆಗೂ ಊಟಕ್ಕೆ ಕೂಡ ನಿಲ್ಲಲು ಮನಸ್ಸಾಗುವುದಿಲ್ಲ. ಬೆಲೆ 6 ಆಣೆ ಪೋಸ್ಟೇಜು 1 ಆಣೆ. ಮುಂಗಡ ಕಳುಹಿಸಬೇಕು

ದೊರೆಯುವ ಸ್ಥಳ—

ಸತ್ಯವಾದಿ ಆಫೀಸ್ ಮೈಸೂರು

ಶ್ರೀ ರಾಮಚಂದ್ರ ಬುಕ್ ಡಿಪೋ

ದೇವರಾಜ ಮಾರ್ಕೆಟ್, ಮೈಸೂರು

For good printing
Saraswati Printing Press
Lansdowne Buildings, Mysore
Lakshminarasimha Press
Srirampet, Mysore

ಪಿ. ಮಂಜಪ್ಪ ಏಜೆಂಟ್

ಮಂಗಳೂರು ಗಣಪತಿ, ಸುವರ್ಣಾ ಗಜಾನನ ಬೀಡಿಗಳನ್ನೆ ಉಪಯೋಗಿಸಿ

ಹಳೇ ಅಗ್ರಹಾರ, ಮೈಸೂರು.

ನಿನ್ನ ಊರಿನ ಮೆಚ್ಚಿನ ಚಲನ ಚಿತ್ರ ಮಂದಿರಗಳಲ್ಲಿ ಏಪುವನೋಡಿ

— ಹೆಚ್ ಆರ್. ಜಿ. ಸಿ. ಯವರ —

ಶ್ರೀ ಪಿಕ್ಚರ್ಸ್

ಗಾಂಧಿಸ್ಟ್ರೀಟ್, ಮೈಸೂರು ಇವರ ಸಂಗೀತರತ್ನ ಅಸ್ಥಾನ ವಿದ್ವಾನ್ ಟಿ ಚೌಡಯ್ಯನವರು, ಕಲ್ಚರ್ಡ್ ಕವೆಡಿಯನ್ ಕೆ ಹಿರಣ್ಣಯ್ಯನವರು ಅಭಿನಯಿಸಿರುವ

ವಾಣಿ or (VIOLINIST)

ಸುಂದರ ಪೂಜಾ ಚಿತ್ರ

New Opera Talkies

From 25-3-43

M A M A J I

with

Lalita Powar
Nandlekar
Jeevan
Yakoob
etc.

ಶ್ರೀ 'ಓಂ' ಬ್ರಾಂಡ್ ಕೇಸರಿ ಈ "ಓಂ" ಗುರ್ತಿನ ಕೇಸರಿಯು ಅತ್ಯಂತ ಪರಿಶುದ್ಧವಾದುದು. ಇದರಲ್ಲಿ ಯಾವ ಅಕ್ಷೇಪಕರವಾದ ಪದಾರ್ಥವೂ ಸೇರಿಲ್ಲ; ಮತ್ತು ಶಾಸ್ತ್ರೀಯವಾಗಿ ಪರಿಶುದ್ಧವಾದುದು. ದೇವಸ್ಥಾನಗಳಲ್ಲಿಯೂ ದೇವರ ವೂಜೆಗೂ, ಔಷಧಿಗಳಿಗೂ ತಿಂಡಿ ಪದಾರ್ಥಗಳಿಗೂ ಸುಖ ಸಂತೋಷಕಾಲದಲ್ಲೂ ಉಪಯೋಗಿಸಲ್ಪಡಲು ಅರ್ಹವಾಗಿದೆ.

ಅತ್ಯಂತ ಪರಿಶುದ್ಧವಾದುದೆಂದು ಗ್ಯಾರಂಟಿ ಹೊಂದಿದೆ.

ವಲ್ಲಭದಾಸ್ ತೇಜಪಾಲ್

೧೪ ಗೋವಿಂದಪ್ಪನಾಯಕ ಸ್ಟ್ರೀಟ್, ಜಿ. ಟಿ. ಮದರಾಸು

Edited, Printed & published by M. S. Krishna Rao, at the Satyavadi Press. Chamaraja Agrahar, Mysore.